ಅಸಲು ದಾವಾ ನಂ.17/2021 ಪಿಡಬ್ಲೂ : 1

ದಿನಾಂಕಃ 02-11-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2, 6 ಮತ್ತು 9 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್ ವಿ ಎ ವಕೀಲರಿಂದಃ**

14. ದಾವಾ ಅ ಮತ್ತು ಬ ಪರಿಶಿಷ್ಟದ ಆಸ್ತಿಗಳು ನಮ್ಮ ಕಬ್ಜಾದಲ್ಲಿ ಯಾವತ್ತೂ ಇಲ್ಲ ಎಂದರೆ ಸರಿ . ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳು ಸದರಿ ಆಸ್ತಿಗಳ ಲಗ್ತುದಾರರ ಕಬ್ಜಾದಲ್ಲಿ ಇವೆ ಎಂದರೆ ಸರಿ . ಸದರಿ ಲಗ್ತುದಾರರರು ಯಾರೆಂದರೆ 3 ರಿಂದ 7 ನೇ ಪ್ರತಿವಾದಿಯರ ಎಂದರೆ ಸಾಕ್ಷಿಯು ಅವರು ಸದರಿ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಅತೀಕ್ರಮಣದಾರರು ಸದರಿ ಆಸ್ತಿಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಆಸ್ತಿಗಳಿಗೆ ಹೋಗಿ ನಮಗೆ ಕಬ್ಜಾ ಮಾಡಲು ಶಕ್ಯ ಇಲ್ಲ ಎಂದರೆ ಸರಿಯಲ್ಲ . ಹಾಗಾಗಿ ಸದರಿ ಜಮೀನನ್ನು ಸದರಿ ಅತೀಕ್ರಮಣದಾರರಿಗೆ ಮಾರಾಟ ಮಾಡುವುದೇ ಸೂಕ್ತ ಎಂದರೆ ಸರಿಯಲ್ಲ . ದಾವಾ ಅ ಮತ್ತು ಬ ಪರಿಶಿಷ್ಟದ ಸ್ಥಳಗಳು 3 ರಿಂದ 11 ನೇ ಪ್ರತಿವಾದಿಯರಿಗೆ ಮಾರಾಟ ಆಗಿದೆ ಎಂದರೆ ಸರಿ .

15. ನಮ್ಮ ಕಬ್ಜಾ ವಹಿವಾಟು ವ್ಯವಹಾರವನ್ನು 2 ನೇ ಪ್ರತಿವಾದಿಯು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ . ಆ ಕುರಿತು ನಾವು 2 ನೇ ಪ್ರತಿವಾದಿಗೆ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ಅದೇ ರೀತಿ ನನ್ನ ದೊಡ್ಡಪ್ಪನಾದ ವಿಶ್ವೇಶ್ವರ ಗೋಪಿ ಹಾಗೂ ದೊಡ್ಡಮ್ಮನಾದ ಶಾರದಾ ಗೋಪಿ 2 ನೇ ಪ್ರತಿವಾದಿಗೆ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ದಿಃ 23-08-2011 ರಂದು ತಾನು ಮತ್ತು ಇತರರು 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಸಾಮಾನ್ಯ ಮೊಕ್ತಾರನಾಮೆಯನ್ನು ತೋರಿಸಲಾಗಿ ಅವರು ಅದನ್ನು ಗುರುತಿಸಿದ್ದು ಅದನ್ನು ನಿಡಿ -1 ಎಂದು ಗುರುತಿಸಲಾಯಿತು. ನಾನು, ಇತರ ವಾದಿಯರು, ನಮ್ಮ ತಾಯಿ ಹಾಗೂ 1 ನೇ ಪ್ರತಿವಾದಿಯು

ಮಾತುಕತೆ ಮಾಡಿ ನಿಡಿ –1 ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ನಿಡಿ–1ರ ಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ ಎಂದರೆ ಸರಿ . ಸಾಕ್ಷಿಗೆ ದಿಃ 02–03–2012 ರಂದು ಮೇಲೆ ಹೇಳಿದ ಶಾರದಾ ವಿಶ್ವೇಶ್ವರ ಭಟ್ಟ ಗೋಪಿರವರು 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಸಾಮಾನ್ಯ ಮೊಕ್ತಾರನಾಮೆಯನ್ನು ತೋರಿಸಲಾಗಿ ಅವರು ಅದನ್ನು ಗುರುತಿಸಿದ್ದು ಅದನ್ನು ನಿಡಿ –2 ಎಂದು ಗುರುತಿಸಲಾಯಿತು. ನಿಡಿ–2 ನ್ನು 2 ನೇ ಪ್ರತಿವಾದಿಗೆ ಬರೆದುಕೊಡುವ ಸಂದರ್ಭದಲ್ಲಿ ಸದರಿ ಶಾರದಾ ಗೋಪಿರವರು ನಮ್ಮ ಹತ್ತಿರ ಮಾತುಕತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನನ್ನ ದೊಡ್ಡಮ್ಮ 2 ನೇ ಪ್ರತಿವಾದಿಗೆ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುವ ಬಗ್ಗೆ ನಾವು ನನ್ನ ದೊಡ್ಡಮ್ಮನನ್ನು ವಿಚಾರಿಸಿರುವುದಿಲ್ಲ . ಅದೇ ರೀತಿ ನಮ್ಮ ಮೇಲೆ ಹೇಳಿದ ದೊಡ್ಡಪ್ಪ 2 ನೇ ಪ್ರತಿವಾದಿಗೆ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುವ ಬಗ್ಗೆ ನಾವು ವಿಚಾರ ಮಾಡಿಲ್ಲ ಹಾಗೂ ಅವರು ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ . 3 ರಿಂದ 11 ನೇ ಪ್ರತಿವಾದಿಯರಿಗೆ ಮಾಡಿರುವ ಕ್ರಯಪತ್ರ ಮೇಲೆ ಹೇಳಿದ ನಿಡಿ –1 ಮತ್ತು 2 ಮೊಕ್ತಾರನಾಮೆಯ ಆಧಾರದ ಮೇರೆಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ .

16. ನಿಡಿ–1 ನ್ನು ನಾವು ಇಲ್ಲಿಯವರೆಗೂ ರದ್ದುಗೊಳಿಸಿರುವುದಿಲ್ಲ ಎಂದರೆ ಸರಿ . ನಾವು 2 ನೇ ಪ್ರತಿವಾದಿಗೆ ವಹಿವಾಟು ಮತ್ತು ವ್ಯವಹಾರವನ್ನು ಮಾಡಲು ಮಾತ್ರ 2 ನೇ ಪ್ರತಿವಾದಿಗೆ ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತೇವೆ, ಸದರಿ ಮೊಕ್ತಾರನಾಮೆಯನ್ನು ಆಸ್ತಿಯನ್ನು ಮಾರಾಟ ಮಾಡಲು ಕೊಟ್ಟಿರುವುದಿಲ್ಲ, ಆದ್ದರಿಂದ ಅವರು ನಮಗೆ ಮೋಸ ಮಾಡಿರುತ್ತಾರೆ . ಈ ರೀತಿ ವಹಿವಾಟನ್ನು ಮಾಡಲು ಮಾತ್ರ ಮೊಕ್ತಾರನಾಮೆಯನ್ನು ಕೊಟ್ಟಿರುತ್ತೇವೆ , ಆಸ್ತಿಯನ್ನು ಮಾರಾಟ ಮಾಡಲು ಮೊಕ್ತಾರನಾಮೆಯನ್ನು ಕೊಟ್ಟಿಲ್ಲ ಎಂದು ನಾವು 2 ನೇ ಪ್ರತಿವಾದಿಗೆ ನೋಟಿಸನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನೋಟಿಸನ್ನು ಕೊಟ್ಟಿಲ್ಲ , ಯಾಕೆಂದರೆ ಅದು ನಮಗೆ ಗೊತ್ತಾದದ್ದೇ 2021 ನೇ ಇಸವಿಯ ಫೆಬ್ರುವರಿ ತಿಂಗಳಿನಲ್ಲಿ ಎಂದು ನುಡಿಯುತ್ತಾರೆ . 2009 ನೇ ಇಸವಿಯಿಂದ ನನ್ನ ಮತ್ತು 1 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿರುವುದಿಲ್ಲ . 2021 ರಿಂದ 2 ಮತ್ತು 3 ನೇ ವಾದಿ ಹಾಗೂ 1 ನೇ

ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿರುವುದಿಲ್ಲ . 2021 ರವರೆಗೆ 2 ಮತ್ತು 3 ನೇ ವಾದಿಯರು 1 ನೇ ಪ್ರತಿವಾದಿಯೊಂದಿಗೆ ಮಾತುಕತೆ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ .

17. 1 ಮತ್ತು 2 ನೇ ಪ್ರತಿವಾದಿಯರು ಯಾವ ರೀತಿ ಶಾಮೀಲಾಗಿದ್ದಾರೆ ಎಂದರೆ ಸಾಕ್ಷಿಯು ಅವರಿಬ್ಬರು ಸೇರಿಕೊಂಡು ಮಾರಾಟ ಮಾಡಿರುವ ವಿಚಾರ ತನಗೆ ಫೆಬ್ರುವರಿ 2021 ರಂದು ಗೊತ್ತಾಯಿತು ಎಂದು ನುಡಿಯುತ್ತಾರೆ . ಆ ರೀತಿ ಗೊತ್ತಾದ ನಂತರ ಕ್ರಯದಸ್ತಾವೇಜಿನ ಆಧಾರದ ಮೇರೆಗೆ ಆಗಿರುವ ಮ್ಯುಟೇಶನ್ ಎಂಟ್ರಿಗೆ ನಾವು ತಕರಾರು ಮಾಡಿರುವುದಿಲ್ಲ . ಸ್ಥಳೀಯರನ್ನು ವಿಚಾರಿಸಿದಾಗ ಕ್ರಯ ದಸ್ತಾವೇಜಿನಲ್ಲಿ ಕಡಿಮೆ ಪ್ರತಿಫಲವನ್ನು ತೋರಿಸಿ ಹೆಚ್ಚಿನ ಪ್ರತಿಫಲವನ್ನು ಪಡೆದಿರುವ ವಿಷಯ ನಮಗೆ ಗೊತ್ತಾಯಿತು . ಸದರಿ ಸ್ಥಳೀಯರ ಹೆಸರು ನನಗೆ ಗೊತ್ತಿಲ್ಲ . ಸದರಿ ಕ್ರಯದ ಪ್ರತಿಫಲದ ಬಗ್ಗೆ ನಾನು 3 ರಿಂದ 11 ನೇ ಪ್ರತಿವಾದಿಯರನ್ನು ವಿಚಾರಿಸಿರುವುದಿಲ್ಲ. ಅದೇ ರೀತಿ ಮಾರಾಟ ಮಾಡಿದ ಆಸ್ತಿಗಳ ಮಾರುಕಟ್ಟೆ ಧಾರಣೆ ಎಷ್ಟು ಇದೆ ಎಂದು ಉಪ ನೋಂದಣಿ ಅಧಿಕಾರಿಯ ಕಚೇರಿಯಲ್ಲಿ ನಾವು ವಿಚಾರಿಸಿರುವುದಿಲ್ಲ. ಕ್ರಯ ದಸ್ತಾವೇಜು ನೋಂದಣಿ ಆಗುವ ಸಂದರ್ಭದಲ್ಲಿ ಮೇಲೆ ಹೇಳಿದ ನಿಡಿ –1 ಮತ್ತು 2 ಮೊಕ್ತಾರನಾಮೆಯ ಮೇಲ್ಗಡೆಗೆ ಮುದ್ರಾಂಕ ಶುಲ್ಕವನ್ನು ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

18. ನನ್ನ ತಾಯಿಗೆ ಕಿಡ್ನಿ ವೈಫಲ್ಯತೆ ಇದ್ದುದ್ದರಿಂದ ಅವರಿಗೆ 2008–2009 ರಿಂದ ಡಯಾಲಿಸಿಸ್ ಮಾಡಿಸುತ್ತಿದ್ದೆವು . ನನ್ನ ತಾಯಿ ದಿಃ 27–08–2016 ರಂದು ತೀರಿಹೋಗಿರುತ್ತಾರೆ . 2 ನೇ ವಾದಿಯು ಕೊಂಕಣ ರೇಲ್ವೆ ಸೇವೆ ಸಲ್ಲಿಸುತ್ತಿದ್ದು ಅವರು ಗೋವಾದಲ್ಲಿ ಇದ್ದು , ನಮ್ಮ ತಾಯಿಗೆ ಗೋವಾದಲ್ಲಿ ವಾರಕ್ಕೆ ಎರಡು ಬಾರಿ ಅವರು ತೀರಿಹೋಗುವವರೆಗೆ ಡಯಾಲಿಸಿಸ್ ಮಾಡಿಸುತ್ತಿದ್ದರು . ಆ ವೇಳೆಯಲ್ಲಿ ನಮಗೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಹೇಳುತ್ತಾರೆ , ಸದರಿ ತನ್ನ ತಾಯಿಯ ಚಿಕಿತ್ಸೆಯ ಖರ್ಚು ರೇಲ್ವೆ ಇಲಾಖೆಯಿಂದ ಉಚಿತವಾಗಿ ಸಿಕ್ಕಿರುತ್ತದೆ ಎಂದು . ಆ ಸಂದರ್ಭದಲ್ಲಿ ನಮ್ಮ ಕುಟುಂಬಕ್ಕೆ ಹಣದ ಅವಶ್ಯಕತೆ ಇದ್ದುದ್ದರಿಂದ 2 ನೇ ಪ್ರತಿವಾದಿಯು ನಮ್ಮ ಜೊತೆ

ಮಾತುಕತೆ ಮಾಡಿ ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೊಂಕಣ ರೇಲ್ವೆಯಿಂದ ನನ್ನ ತಮ್ಮ ನಮ್ಮ ತಾಯಿಗೆ ಉಚಿತವಾದ ಚಿಕಿತ್ಸೆಯನ್ನು ಕೊಡಿಸುತ್ತಿದ್ದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಕ್ರಯ ದಸ್ತಾವೇಜಿಗ ನಮ್ಮ ಸಹಿ ಇರುವುದಿಲ್ಲ ಹಾಗೂ ನಮಗೆ ಗೊತ್ತಿಲ್ಲದೇ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತೇವೆ . ಸದರಿ ಆಸ್ತಿಗಳನ್ನು ಮಾರಾಟ ಮಾಡುವಾಗ ನಮಗೆಲ್ಲರಿಗೂ 2 ನೇ ಪ್ರತಿವಾದಿಯು ತಿಳಿಸಿರುತ್ತಾರೆ ಹಾಗೂ ಕ್ರಯದ ಹಣವನ್ನು ನಮಗೆಲ್ಲರಿಗೂ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . ಕ್ರಯದಸ್ತು ಮಾಡಿದ್ದರಲ್ಲಿ 2 ನೇ ಪ್ರತಿವಾದಿಯು ನಮಗೆ ಯಾವುದೇ ರೀತಿಯ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ .

19. ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳಿಗೆ ಸಂಬಂಧಿಸಿದಂತೆ ಮೂಲ ದಾವಾ ನಂ . 135/2011 ನ್ನು ಕುಮಟಾದ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ 2 ನೇ ಪ್ರತಿವಾದಿಯು ನಮ್ಮ ಮತ್ತು ನನ್ನ ದೊಡ್ಡಪ್ಪನ ಪರವಾಗಿ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ 3 ನೇ ಪ್ರತಿವಾದಿ ಮತ್ತು ಬಾಲಚಂದ್ರ ಪ್ರಸಾದ ಎಂಬವರು ಪಕ್ಷಗಾರರಾಗಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾವೆ ದಾಖಲಾಗಿರುವ ಬಗ್ಗೆ ಗೊತ್ತಿಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ನುಡಿಯುತ್ತಾರೆ . ಅದೇ ರೀತಿ ಮೇಲೆ ಹೇಳಿದ ಬಾಲಚಂದ್ರ ಪ್ರಸಾದರವರು ಮೇಲೆ ಹೇಳಿದ ನ್ಯಾಯಾಲಯದಲ್ಲಿ ನಮ್ಮ ಮೇಲೆ ಮೂಲ ದಾವಾ ನಂ. 139/2015 ನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ದಾವೆಯಲ್ಲಿ ನಾನು , ನನ್ನ ತಾಯಿ , ಉಳಿದ ವಾದಿಯರು ಮತ್ತು 1 ನೇ ಪ್ರತಿವಾದಿಯು ಪಕ್ಷಗಾರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ದಾವೆಯಲ್ಲಿ ನನಗೆ ಸಮನ್ಸ ಜಾರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ದಾವೆಯಲ್ಲಿ ನಮಗೆ ಸಮನ್ಸ ಜಾರಿಯಾಗಿ ನಮ್ಮ ಪರವಾಗಿ 2 ನೇ ಪ್ರತಿವಾದಿಯು ಹಾಜರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈ ಎಲ್ಲಾ ಕ್ರಯದ ವ್ಯವಹಾರಗಳು ನಮಗೆ 2015 ನೇ ಇಸವಿಯ ಮುಂಚೆಯೇ ಗೊತ್ತಾಗಿತ್ತು ಎಂದರೆ ಸರಿಯಲ್ಲ . ಆ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ನಾನು, ಉಳಿದ ವಾದಿಯರು, ನನ್ನ ತಾಯಿ ಹಾಗೂ 1 ನೇ ಪ್ರತಿವಾದಿಯು ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳನ್ನು ಮಾರಾಟ ಮಾಡುವ ಸಲುವಾಗಿಯೂ ಸಹ 2 ನೇ ಪ್ರತಿವಾದಿಗೆ ಮುಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ . ಅದೇ ರೀತಿ ನನ್ನ ದೊಡ್ಡಮ್ಮನು ಸಹ 2 ನೇ ಪ್ರತಿವಾದಿಗೆ ಕ್ರಯ ದಸ್ತಾವೇಜು ಮಾಡಿಕೊಡಲು ಮೊಕ್ತಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಯು ನಮ್ಮ ಅವಿಭಕ್ತ ಕುಟುಂಬದ ನಾತೆಯಿಂದ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎಂದರೆ ಇರಬಹುದು . ಅವರವರ ಕಬ್ಜಾ ವಹಿವಾಟು ಇದ್ದುದ್ದರಿಂದ ಹಾಗೂ ಅವರವರು ರೆಸಾರ್ಟಗಳನ್ನು ಕಟ್ಟಿಕೊಂಡಿರುವುದರಿಂದ ಅವರವರಿಗೆ ಕ್ರಯ ದಸ್ತಾವೇಜುಗಳನ್ನು ಮಾಡಿಕೊಡಲಾಗಿದೆ ಎಂದರೆ ಸರಿಯಲ್ಲ . ಅವರಿಂದ ಯಾವತ್ತೂ ಸಹ ಕಬ್ಜಾ ವಹಿವಾಟನ್ನು ತೆಗೆದುಕೊಳ್ಳಲು ಸಾಧ್ಯವೇ ಇಲ್ಲ ಎಂದು ಮನಗೊಂಡು ನಾವೆಲ್ಲರೂ ಹಾಗೂ 2 ನೇ ಪ್ರತಿವಾದಿಯು ಮಾತುಕತೆ ನಡೆಸಿಯೇ ಕ್ರಯದ ವ್ಯವಹಾರವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ . ಮತ್ತು ನನ್ನ ತಾಯಿ ಕಿಡ್ನಿ ವೈಫಲ್ಯತೆಯಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಅವರ ಚಿಕಿತ್ಸೆಯ ಖರ್ಚಿನ ಸಲುವಾಗಿಯೂ ಸಹ ದಾವಾ ಅ ಮತ್ತು ಬ ಪರಿಶಿಷ್ಟ ಆಸ್ತಿಗಳನ್ನು ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ . ಸದರಿ ಕ್ರಯದ ವ್ಯವಹಾರ ಕಾಯ್ದೆಬದ್ಧವಾಗಿದೆ ಎಂದರೆ ಸರಿಯಲ್ಲ .

ಉಳಿದ ಪ್ರತಿವಾದಿಯರ ಪಾಟೀ ಸವಾಲಿಗಾಗಿ ಕೋರಿಕೆಯ ಮೇರೆಗೆ ಮೂಂದೂಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.